ಕರ್ನಾಟಕ ಸರ್ಕಾರ

# ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

KOPPAL INSTITUTE OF MEDICAL SCIENCES (R), KOPPAL

ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15-03-2013

(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)

Website : www.kimskoppal.kar.nic.in | email :directorkimskoppal@gmail.com

Director : 08539 225944 | Fax:08539 225944 | Med. Suptd : 08539 225022

No: KIMS, Koppal/ 22 /2015-16

Office of the Director
KIMS, Koppal. Dated: 13/04/2015

## ಅಧಿಸೂಚನೆ

**ವಿಷಯ:** ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ರಡಿಯಲ್ಲಿ ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ ಕೊಪ್ಪಳದಲ್ಲಿನ ವಿವಿಧ ವೃಂದಗಳಲ್ಲಿ ಹೈದರಾಬಾದ್-ಕರ್ನಾಟಕ ಪ್ರದೇಶದವರಿಗಾಗಿ ಹುದ್ದೆಗಳನ್ನು ಗುರುತಿಸಿ ಸ್ಥಳೀಯ ವೃಂದವನ್ನು ಸೃಜಿಸುವ ಹಾಗೂ ರೋಸ್ಟರ್ ಆವರ್ತಗಳನ್ನು ಅಧಿಸೂಚಿಸುವ ಕುರಿತು.

****

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಅನುಚ್ಛೇದ 371(ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಿರುವ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013ರ 3 ಮತ್ತು 13ನೇ ಕಂಡಿಕೆಗಳಿಗೆ ಅನುಸಾರವಾಗಿ ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ ಕೊಪ್ಪಳದಲ್ಲಿನ ವಿವಿಧ **ಬೋಧಕ ಮತ್ತು ಬೋಧಕೇತರ** ವೃಂದಗಳ ಪೈಕಿ **"ಗ್ರೂಪ್ ಎ"**(ಕಿರಿಯ ಶ್ರೇಣಿ) ಮತ್ತು **"ಗ್ರೂಪ್ ಬಿ"** ಹುದ್ದೆಗಳಿಗೆ ಶೇಕಡ 75% ಹುದ್ದೆಗಳನ್ನು, **"ಗ್ರೂಪ್ ಸಿ"** ಹುದ್ದೆಗಳಿಗೆ ಶೇಕಡ 80%, ಹಾಗೂ **"ಗ್ರೂಪ್ ಡಿ"** ಹುದ್ದೆಗಳಿಗೆ ಶೇಕಡ 85% ಹುದ್ದೆಗಳನ್ನು ಈ ಮೂಲಕ ಮೀಸಲಿರಿಸಿ ಅಧಿಸೂಚನೆಯ ಅನುಬಂಧದಲ್ಲಿ ತೋರಿಸಿರುವಂತೆ ನೇರ ಮತ್ತು ಮುಂಬಡ್ತಿ ಖೋಟಾದಡಿಗೆ ಸಂಬಂಧಿಸಿದಂತೆ ನಮೂದಿಸಿರುವ ಹುದ್ದೆಗಳನ್ನು ಮೀಸಲಿರಿಸಿ ಅಧಿಸೂಚಿಸಲಾಗಿದೆ.

ಮುಂದುವರೆದು ಕರ್ನಾಟಕ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯದ ಅಧಿಸೂಚನೆ ಸಂಖ್ಯೆ:ಡಿಪಿಎಆರ್-43/ಹೆಚ್‌ಕೆಸಿ/2013 ದಿನಾಂಕ:29/01/2014ರ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ)(ಸ್ಥಳೀಯ ವೃಂದಗಳ ರಚನೆ ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆಗಳ ನಿಯಮಗಳು 2013ರ 3(4)ರಡಿ **ಘಟಕ ಸ್ಥಳೀಯ ವೃಂದ ಮತ್ತು ಉಳಿದ ಮೂಲ ವೆಂದು ರಚಿಸಿ ಅಧಿಸೂಚಿಸಿದೆ.** ವೃಂದದಲ್ಲಿ ಉಳಿದು ಮುಂದುವರೆದ ಹುದ್ದೆಗಳ ವೃಂದಗಳಿಗೆ ಮೀಸಲಾತಿ ಕಲ್ಪಿಸುವ ಉದ್ದೇಶಕ್ಕಾಗಿ ರೋಸ್ಟರ್ ಆವರ್ತಗಳನ್ನು ನಿರ್ವಹಿಸಿ ಜಾರಿಗೊಳಿಸಬೇಕಾಗುತ್ತದೆ. ಅದೇ ರೀತಿ ನಿಯಮ 5 ರನ್ವಯ ಜಾರಿಗೊಳಿಸಿದ ರೋಸ್ಟರ್ ಆವರ್ತಗಳಲ್ಲಿನ ಬಿಂದುಗಳಲ್ಲಿ ಲಭ್ಯವಾಗುವ ಹುದ್ದೆಗಳನ್ನು ಮೊದಲಿಗೆ ಸ್ಥಳೀಯ ವ್ಯಕ್ತಿಗಳಿಗೆ (ಸ್ಥಳೀಯ ವ್ಯಕ್ತಿ ಎಂದರೆ 06/11/2013ರಲ್ಲಿ ಹೊರಡಿಸಿರುವ ಅರ್ಥವಿವರಣೆಯ ಕಂಡಿಕೆ 2 ಎಫ್ ಹಾಗೂ 6ನೇ ಕಂಡಿಕೆಯಲ್ಲಿ ಅರ್ಹನಾಗಿರುವ ವ್ಯಕ್ತಿ) ಹಂಚಿಕೆ ಮಾಡುವ ಮೂಲಕ ಭರ್ತಿ ಮಾಡಬಹುದಾದ ರೀತಿಯಲ್ಲಿ ಅಧಿಸೂಚಿಸಬೇಕಾಗಿರುತ್ತದೆ. ಈ ನಿಯಮಗಳನ್ವಯ ಸಿದ್ಧಪಡಿಸಿರುವ ರೋಸ್ಟರ್ ಆವರ್ತಗಳನ್ನು (ಸೈಕಲ್ ಮತ್ತು ಪಾಯಿಂಟ್) ಈ ಸಂಸ್ಥೆಯ ಎ ಗುಂಪಿನ ಹುದ್ದೆಯಿಂದ ಡಿ ದರ್ಜೆಯ ಹುದ್ದೆಗಳಿಗೆ ಸಂಬಂಧಿಸಿದಂತೆ ನಿರ್ದೇಶಕರು ಕೊಪ್ಪಳ ವೈದ್ಯಕೀಯ ವಿಜ್ಞಾನ ಸಂಸ್ಥೆ ಕೊಪ್ಪಳ ಇವರು ವೃಂದ ನಿಯಂತ್ರಣ ಪ್ರಾಧಿಕಾರಿಗಳಾಗಿದ್ದು ಈ ಅಧಿಸೂಚನೆಯಲ್ಲಿ ಅನುಬಂಧದಲ್ಲಿ ನಮೂದಿಸಿರುವ ಹುದ್ದೆಗಳಿಗೆ ಸಂಬಂಧಿಸಿದಂತೆ ಅಧಿಸೂಚಿಸಲಾಗಿದೆ.

ನಿರ್ದೇಶಕರು
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಕೊಪ್ಪಳ

**ನಿರ್ದೇಶಕರು**
**ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ**
ಜಿಲಾ ಸ.ಸೆ. ಆವರಣ, ಕೊಪ್ಪಳ

## ಅನುಬಂಧ-1

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳದಲ್ಲಿ ಭೋಧಕ ಮತ್ತು ಬೋಧಕರೇತರ ಹುದ್ದೆಗಳನ್ನು ಭರ್ತಿ ಮಾಡಿರುವ ಹಾಗೂ ಖಾಲಿ ಇರುವ ಮಾಹಿತಿಯು ಈ ಕೆಳಗಿನಂತಿದೆ.

### ಗ್ರೂಪ್-ಎ

| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾದ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಖಾಲಿ ಇರುವ ಹುದ್ದೆಗಳು | ಮಾನದಂಡ |
|---|---|---|---|---|---|
| 1 | ಪ್ರಾಧ್ಯಾಪಕರು | 6 | 1 | 5 | ವೈದ್ಯಕೀಯ ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು ಮತ್ತು ಐದು ವರ್ಷದ ಬೋಧಕ ಅನುಭವ ಉಳ್ಳವರಾಗಿರಬೇಕು. |
| 2 | ಸಹ ಪ್ರಾಧ್ಯಾಪಕರು | 14 | 9 | 5 | ವೈದ್ಯಕೀಯ ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು ಮತ್ತು 3 ವರ್ಷದ ಅನುಭವ ಉಳ್ಳವರಾಗಿರಬೇಕು. |
| 3 | ಸಹಾಯಕ ಪ್ರಾಧ್ಯಾಪಕರು | 23 | 18 | 5 | ಸ್ನಾತಕೋತ್ತರ ಪದವಿಯನ್ನು ಹೊಂದಿರಬೇಕು. |
| 4 | ಸೀನಿಯರ್ ರೆಸಿಡೆಂಟ್ಸ್ | 21 | 02 | 19 | ಎಂಬಿಬಿಎಸ್ ಪದವಿಯನ್ನು ಹೊಂದಿರಬೇಕು ಮತ್ತು ಆಯಾ ವಿಭಾಗದಲ್ಲಿ 3 ವರ್ಷದ ಅನುಭವ ಉಳ್ಳವರಾಗಿರಬೇಕು. |
| 5 | ಜೂನಿಯರ್ ರೆಸಿಡೆಂಟ್ಸ್ | 24 | 09 | 15 | ಎಂಬಿಬಿಎಸ್ ಪದವಿಯನ್ನು ಹೊಂದಿರಬೇಕು |
| 6 | ಟ್ಯೂಟರ್ಸ್ | 17 | 15 | 2 | ಎಂಬಿಬಿಎಸ್ ಪದವಿಯನ್ನು ಹೊಂದಿರಬೇಕು. |
| **ಒಟ್ಟು ಹುದ್ದೆಗಳು** | | **105** | **54** | **51** | |
| 1 | ಮುಖ್ಯ ಆಡಳಿತಾಧಿಕಾರಿಗಳು | 1 | 1 | 0 | |
| 2 | ಆರ್ಥಿಕ ಸಲಹೆಗಾರರು | 1 | 0 | 1 | |

### ಗ್ರೂಪ್-ಬಿ

| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾದ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಖಾಲಿ ಇರುವ ಹುದ್ದೆಗಳು |
|---|---|---|---|---|
| 1 | ನರ್ಸಿಂಗ್ ಸೂಪರಿಂಟೆಂಡೆಂಟ್ | 2 | 0 | 2 |
| 2 | ಡೈಪುಟಿ ನರ್ಸಿಂಗ್ ಸೂಪರಿಂಟೆಂಡೆಂಟ್ | 1 | 0 | 1 |
| 3 | ಅಸಿಸ್ಟೆಂಟ್ ನರ್ಸಿಂಗ್ ಸೂಪರಿಂಟೆಂಡೆಂಟ್ | 4 | 0 | 4 |
| 4 | ಅಕೌಂಟ್ಸ್ ಸೂಪರಿಂಟೆಂಡೆಂಟ್ | 1 | 0 | 1 |
| | **ಒಟ್ಟು ಹುದ್ದೆಗಳು** | **08** | **0** | **8** |

- ಖಾಲಿ ಇರುವ ಬೋಧಕ ಹುದ್ದೆಗಳಲ್ಲಿ 36 ಹುದ್ದೆಗಳನ್ನು ಸಂಚಿತ ವೇತನದನ್ವಯ ತುಂಬಲಾಗಿದೆ.
- ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳದಲ್ಲಿ ಗ್ರೂಪ್-ಸಿ, ಮತ್ತು ಗ್ರೂಪ್-ಡಿ ಹುದ್ದೆಗಳನ್ನು ಭರ್ತಿಮಾಡಿರುವುದಿಲ್ಲ.

ನಿರ್ದೇಶಕರು,
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಕೊಪ್ಪಳ.

ನಿರ್ದೇಶಕರು
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಜಿಲ್ಲಾಸ್ಪತ್ರೆ ಆವರಣ, ಕೊಪ್ಪಳ.